ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ನಾನು ತಮಗೆಲ್ಲರಿಗೂ ಬರೆದು ಕಳಿಸಿದ್ದೆ ನನ್ನ ಮತಕ್ಷೇತ್ರದಲ್ಲಿ ಈ ದಿನ ನಡೆಯಬೇಕಾಗಿದ್ದ ಗ್ರಾಮ ಪಂಚಾಯಿತಿಯ...

ಅಧ್ಯಕ್ಷರು:- ಒಂದು ನಿಮಿಷ ಅದನ್ನು ಮುಗಿಸಿ ಬಿಡುತ್ತೇನೆ.

ಪ್ರಸ್ತಾಪ ಏನೆಂದರೆ ''ಹಿರಿಯ ಜೈಲು ಬಗ್ಗೆ ಜಂಟಿ ಸದನ ಸಮಿತಿಯ ಕಾಲಾವಧಿಯನ್ನು ಒಂದು ಬಾರಿಗೆ ವಿಸ್ತರಿಸುವುದು''

(ಪ್ರಸ್ತಾಪ ಅಂಗೀಕಾರವಾಯಿತು ಹಾಗೂ ಒಂದು ಬಾರಿ ಕಾಲಾವಧಿ ವಿಸ್ತರಣೆಗೆ ಅನುಮೋದನೆ ದೊರಕಿತು)

ಅಧ್ಯಕ್ಷರು:- ಮಾನ್ಯ ಶಿರೆಸ್ತಾದಾರರೆ, ಧರ್ಮಸಿಂಗ್ ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಕೋರಿದ್ದಾರೆ; ಅದಕ್ಕೆ ಒಂದು ಅವಕಾಶವನ್ನು ಕೊಡುತ್ತೇನೆ. ಆಮೇಲೆ ನೀವು ಹೇಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ನಿಂತಾಗಲೇ ನಾವು ಬೆಂಬಲ ಕೊಡಬೇಕು.

ಅಧ್ಯಕ್ಷರು:- ನಾವು ನೀವು ಎಲ್ಲ ಅವರಿಗೆ ಬೆಂಬಲ ತಾನೇ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ:- ಟೌನ್ ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಯನ್ನು ಮುಂದೂಡಿರುವುದು.

+ ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಈ ದಿನ ನನ್ನ ಮತ ಕ್ಷೇತ್ರದಲ್ಲಿ ಚುನಾವಣೆ ನಡೆಯಬೇಕಾಗಿತ್ತು. ಸರ್ಕಾರ ದಿನಾಂಕ ಕೂಡ ನಿಗದಿಪಡಿಸಿತ್ತು. ಈಗಾಗಲೇ ಫೋನ್ ಮುಖಾಂತರ ಗೊತ್ತಾಗಿದೆ. ಅದನ್ನು ಪೋಸ್ಟ್‌ಪೋನ್ ಮಾಡಿದ್ದಾರೆ. ಆ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್‌ಗೆ ಅಗತ್ಯಕ್ಕೆ ಚುನಾವಣೆಯನ್ನು ಅವತ್ತಿನ ದಿವಸ ಮುಂದೂಡಲಾಗಿದೆ. ಈ ದಿನ ಸಂಬಂಧಪಟ್ಟ ಮಂತ್ರಿಗಳೂ ಇಲ್ಲ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇಲ್ಲ ಇಲ್ಲ. ಸರ್ಕಾರಿಯ ವ್ಯವಹಾರ ಮಂತ್ರಿಗಳು ಇದ್ದಾರೆ. ಗುಲ್ಬರ್ಗ ಜಿಲ್ಲೆಯಲ್ಲಿ ಚಿಂಚೋಳಿ, ಅಫಜಲಪುರ ಮತ್ತು ಜೇವರ್ಗಿ ಮೂರು ಟೌನ್ ಪಂಚಾಯಿತಿ ಇವೆ. ಈಗಾಗಲೇ ಗೆಜೆಟ್ ನೋಟಿಫಿಕೇಶನ್ ಆಗಿದೆ. ಕೋರ್ಟ್ ಪ್ರಕಾರ ನಮ್ಮಲ್ಲಿ ಜೇವರ್ಗಿಯಲ್ಲಿ ಪರಿಶಿಷ್ಟ ಮಹಿಳೆ ಮತ್ತು ಸಾಮಾನ್ಯ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆಯತಕ್ಕದ್ದು. ಅದರ್ಲಿ ಚುನಾವಣೆ ನಿಗದಿ ಪಡಿಸಿ ಎಲ್ಲಾ ಸದಸ್ಯರು ಕೂಡ ಕಛೇರಿಗೆ ಹೋಗಿದ್ದಾರೆ. ಅಲ್ಲಿಂದ ಮಾರಾಣೆ ಮುಂಜಾನೆ ಸರ್ಕಾರದಿಂದ ಈ ಚುನಾವಣೆಯನ್ನು ಮುಂದೂಡಲಾಗಿದೆ ಎಂದು ಆದೇಶ ಹೋಗಿದೆ. ಮತ್ತು ಅಫಜಲಪುರದಲ್ಲಿ ನಡೆಯತಕ್ಕ ಚುನಾವಣೆ ಏನು ಇದೆ. ಅಲ್ಲಿರತಕ್ಕಂಥ ಹಿಂದುಳಿದ ಮಹಿಳೆ ಮತ್ತು ಅಲ್ಲಿ ಪರಿಶಿಷ್ಟ ಜಾತಿಯವರು ಉಪಾಧ್ಯಕ್ಷರು ಆಗಬೇಕು. ಆ

ರೋಸ್ಟರ್ ಕೂಡ ತಾವು ಬದಲಾಯಿಸಿದ್ದೀರಿ. ಒಮ್ಮೆ ಗೆಜೆಟ್ ನೋಟಿಫಿಕೇಶನ್ ಆಗಿಬಿಟ್ಟರೆ ಸರ್ಕಾರದ ವತಿಯಿಂದ ಯಾವುದೇ ಸಂದರ್ಭದಲ್ಲಿಯೂ ಕೂಡ ತಾವು ಗೆಜೆಟ್ ನೋಟಿಫಿಕೇಶನ್ ಕ್ಯಾನ್ಸಲ್ ಮಾಡತಕ್ಕದ್ದು ಇಲ್ಲ. ರಾಜೀವ್ ಗಾಂಧಿಯವರು ಸಂವಿಧಾನದ ತಿದ್ದುಪಡಿ ಮಾಡಿದಾಗ ಎಲ್ಲಾ ಕಡೆಯಲ್ಲಿಯೂ ಕೂಡ ಇಂತಹ ಒಂದು ಪ್ರಾತಿನಿಧ್ಯ ಕೊಡಬೇಕೆನ್ನತಕ್ಕ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡಾಗ ಇವತ್ತಿನ ದಿವಸ ಚುನಾವಣೆ ನಡೆಯತಕ್ಕ ಕಾಲದಲ್ಲಿ ಸರ್ಕಾರದ ಕಡೆಯಿಂದ ಚುನಾವಣೆಯನ್ನು ಮುಂದೆ ಹಾಕತಕ್ಕದ್ದು, ರೋಸ್ಟರ್ ಕೂಡ ಸ್ಥಳಾಂತರ ಮಾಡತಕ್ಕದ್ದು ಸರಿಯಲ್ಲ. ಜೇವರಗಿಯಿಂದ ಅಫ್‌ಜಲ್‌ಪುರಕ್ಕೆ ಅಫ್‌ಜಲ್‌ಪುರನಲ್ಲಿರತಕ್ಕದ್ದು ಜೇವರಿಗಿಗೆ ಏಕೆ ಆಯಿತು ಏನಾಗಿದೆ? ಇದರ ಬಗ್ಗೆ ಸ್ಪಷ್ಟವಾದ ಉತ್ತರ ಸರ್ಕಾರದ ಕಡೆಯಿಂದ ಬರಬೇಕು. ಮತ್ತೆ ಅಲ್ಲಿ ಆಗತಕ್ಕ ಅನ್ಯಾಯ ಏನು ಇದೆ, ಅದರ ಬಗ್ಗೆ ಕೂಡ ಸ್ಪಷ್ಟವಾದ ಉತ್ತರ ಕೊಡಬೇಕು.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗ ತಮಗೆ ಗೊತ್ತಿದೆ. ಚುನಾವಣೆಯಲ್ಲಿ ನಾವು ಹಸ್ತಕ್ಷೇಪ ಮಾಡಬಾರದು ಎನ್ನುವುದು ಎಲ್ಲರ ಅಭಿಪ್ರಾಯ ಮತ್ತು ಇಲ್ಲಿಯವರೆಗೆ ಯಾರೂ ಕೂಡ ಈ ರೀತಿಯಾಗಿ ಮಾಡಿಲ್ಲ. ಅದೂ ವಿಶೇಷವಾಗಿ ಪಂಚಾಯತ್ ಜಿಲ್ಲಾ ಪರಿಷತ್ ಒಂದು ಸಾರಿ ರೋಸ್ಟರ್ ಫಿಕ್ಸ್ ಆಗಿ ಚುನಾವಣೆ ಇವತ್ತಿನ ದಿವಸ ಇದ್ದಾಗ ನಿನ್ನೆ ರಾತ್ರಿ ತರಾತುರಿಯಲ್ಲಿ ರೋಷ್ಟರ್ ಛೇಂಜ್ ಮಾಡಿ ಅಫ್‌ಜಲ್‌ಪುರದ್ದು ಜೇವರಗಿಗೆ ಮತ್ತು ಜೇವರಗಿಯಿಂದ ಅಫ್‌ಜಲ್‌ಪುರಕ್ಕೆ ವರ್ಗಾವಣೆ ಮಾಡಿ ಚುನಾವಣೆಯನ್ನೇ ಪೋಸ್ಟ್‌ಪೋನ್ ಮಾಡಿದ್ದಾರೆ. ಇದ್ದ ಉದ್ದೇಶ ಏನೆಂದರೆ ಜೇವರಗಿಯಲ್ಲಿ ಷೆಡ್ಯೂಲ್ಡ್ ಕಾಸ್ಟ್ ಲೇಡಿ ಇದ್ದದ್ದನ್ನು ತೆಗೆದು ಅಫ್‌ಜಲ್‌ಪುರಕ್ಕೆ ಏಕೆ ಹಾಕಿದರು ಎಂದರೆ ಅಫ್‌ಜಲ್‌ಪುರ್‌ನಲ್ಲಿ ಅವರ ಕ್ಯಾಂಡಿಡೇಟ್, ಜನತಾದಳ ಕ್ಯಾಂಡಿಡೇಟ್ ಅಲ್ಲಿ ಎಲೆಕ್ಟ್ ಆಗಿದ್ದಾರೆ. ಆದರೆ ಅವರಿಗೆ ಅಲ್ಲಿ ಬಹುಮತ ಇಲ್ಲ. ಬಹುಮತ ಇಲ್ಲದೇ ಇದ್ದರೂ ಕೂಡ ಅಲ್ಲಿ ಎಸ್.ಸಿ.ಕ್ಯಾಂಡಿಡೇಟ್ ಹಾಕಿದರೆ ಅದರ ಪಾರ್ಟಿಯವರು ಏನು ಮೂರ್ನಾಲ್ಕು ಜನ ಎಲೆಕ್ಟ್ ಆಗಿ ಬಂದಿದ್ದಾರೋ ಅವರಿಗೆ ಅಧ್ಯಕ್ಷಗಿರಿ ಸಿಕ್ಕಬೇಕು ಎನ್ನತಕ್ಕ ದೃಷ್ಟಿಯಿಂದ ಅಲ್ಲಿ ಹಾಕಿದ್ದಾರೆ. ಇಲ್ಲಿ ಏಕೆ ಹಾಕಿದ್ದಾರೆ ಎಂದರೆ ಇಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಸಿಗುತ್ತಾರೆಂದು ಹೇಳಿ ಜೇವರಗಿಗೆ ಹಾಕಿದ್ದಾರೆ. ಈ ರೀತಿಯಾಗಿ ನೀವು ಎಲ್ಲೂ ಕೂಡ ಮಾಡದೇ ಅಲ್ಲಿ ಇವತ್ತಿನ ದಿವಸ ರೋಸ್ಟರ್ ಛೇಂಜ್ ಮಾಡಿದ್ದೀರಿ. ಕಾನೂನಿನಲ್ಲಿ ಅದರ ವ್ಯವಸ್ಥೆ ಇಲ್ಲ. ಸೆಕ್ರೆಟರಿ ಅದಕ್ಕೆ ಒಪ್ಪಿಲ್ಲ. ಎಲೆಕ್ಷನ್ ಕಮೀಷನ್‌ನವರು ಯಾರೂ ಒಪ್ಪಿಲ್ಲ. ಡೆಪ್ಯೂಟಿ ಕಮೀಷನರ್ ಒಪ್ಪಿಲ್ಲ. ಈ ಕಾನೂನು ಇಲಾಖೆಯವರು ಒಪ್ಪಿಲ್ಲ. ಆದರೂ ಕೂಡ ನೀವು ಅಡ್ಮಿನಿಸ್ಟ್ರೇಟೀವ್ ಆರ್ಡರ್ ಎಂದು ಹೇಳಿ ನೀವೇ ಫೈಲ್ ಮೇಲೆ ಚೀಫ್ ಮಿನಿಸ್ಟರ್ ಅವರು ಡಿಸಿಷನ್ ತೆಗೆದುಕೊಂಡು ತರಾತುರಿಯಲ್ಲಿ ಇದನ್ನು ಇಶ್ಯೂ ಮಾಡಿ, ಟೆಲಿಫೋನ್ ಮುಖಾಂತರ ನೀವು ಸಂಪರ್ಕ ಮಾಡತಕ್ಕದ್ದು, ಫ್ಯಾಕ್ಸ್ ಕಳಿಸಿ ಎಲೆಕ್ಷನ್ ನಿಲ್ಲಿಸತಕ್ಕದ್ದು ಇದು ನಿಜವಾಗಿಯೂ ಪ್ರಜಾಪ್ರಭುತ್ವ ತತ್ವಕ್ಕೆ ದ್ರೋಹ ಬಗೆದಂತೆ ಇದೆ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸ ಬೇಕಾಗುತ್ತದೆ. ಹೋದ ಸಲ ನೀವು ಗ್ರಾಮ ಪಂಚಾಯತಿಯ

ಸದಸ್ಯರನ್ನು ಏಕೆ ಸೇರಿಸಲಿಲ್ಲ ಎಂದರೆ ನನಗೆ ಗೊತ್ತಾಯಿತು. ಅದರಲ್ಲಿನೂ ಪಾಲಿಟಿಕ್ಸ್ ಎಲ್ಲೆಲ್ಲಿ ಗೆದ್ದು ಬರುತ್ತಾರೆ, ಕಾಂಗ್ರೆಸ್‌ನವರು ಅಥವಾ ಬೇರೆ ಪಕ್ಷದವರು ಎಂದರೆ ನಿಮಗೆ ಬೇಕಾದ ಹಾಗೆ ಅಜಸ್ಟ್ ಮಾಡಿಕೊಳ್ಳಬೇಕು ಎಂದರೆ ಮತ್ತೆ ಚುನಾವಣೆ ಏಕೆ ಮಾಡುತ್ತೀರಿ? ಸುಮ್ಮನೇ ನಾಮಿನೇಟ್ ಮಾಡಿಕೊಳ್ಳುತ್ತಾ ಹೋಗಿ. ಅಲ್ಲಿ ಇಲ್ಲಿ ಒಂದು ಎರಡು ಕ್ಯಾಂಡಿಡೇಟ್ ಎಲೆಕ್ಟ್ ಆಗಿ ಬರತಕ್ಕದ್ದು ಸಹ ನಿಮಗೆ ಟಾಲರೆನ್ಸ್ ಇಲ್ಲ ಎಂದರೆ ಮತ್ತೆ ಏನು ಮಾಡುವುದು? ಬೇಡವೇ ಬೇಡ, ಚುನಾವಣೆಯೇ ಬೇಡ. ಎಲ್ಲಾ ಕಡೆ ನಾಮಿನೇಟ್ ಮಾಡಿಕೊಂಡು ಹೋಗಿ ಅಥವಾ ಎಲ್ಲೆಲ್ಲಿ ಕಾಂಗ್ರೆಸ್‌ನವರು ಗೆದ್ದಿದ್ದಾರೆ ಅಲ್ಲಿ ಸೂಪರ್‌ಸೀಡ್ ಮಾಡಿ ನಿಮ್ಮ ಕ್ಯಾಂಡಿಡೇಟ್ ಅನ್ನು ನಾಮಿನೇಟ್ ಮಾಡಿ ಅಡ್ಜೆಸರಿ ಬೋರ್ಡ್ ಮಾಡಿ. ಇದು ಸರಿಯಲ್ಲ ಇದು ನಿಜವಾಗಿಯೂ ನಾವು ಸೀರಿಯಸ್ ಆಗಿದ್ದೇವೆ. ಇದರ ಬಗ್ಗೆ ಅವರು ಹಿಂತೆಗೆದುಕೊಳ್ಳಬೇಕು. ಆ ರೋಸ್ಟರ್ ಹೇಗೆ ಇದೆ ಕಾನೂನು ಪ್ರಕಾರ ಇರಬೇಕು ಚುನಾವಣೆ ಎಲ್ಲಿ ಏನು ಘೋಷಣೆ ಮಾಡಿದ್ದಾರೆ ನೋಟಿಫಿಕೇಶನ್ ಮಾಡಿದ್ದಾರೆ, ಆ ಡೆಪ್ಯುಟಿ ಕಮೀಷನರ್ ಅವರು ಮಾಡಿದಂತಹ ನೋಟಿಫಿಕೇಶನ್ ಪ್ರಕಾರ ಚುನಾವಣೆ ನಡೆಯಬೇಕೇ ಹೊರತಾಗಿ ಇವರು ಸ್ಟೇ ಮಾಡಿ ಇವತ್ತಿನ ದಿವಸ ರೋಸ್ಟರನ್ನು ಬದಲಾವಣೆ ಮಾಡಿದ್ದಾರೆ, ಅದು ತಪ್ಪಬೇಕು ಎನ್ನತಕ್ಕದ್ದನ್ನು ಹೇಳುತ್ತೇನೆ. ಇನ್ನು ಮೇಲೆ ಈ ರೀತಿ ಮಾಡಿದರೆ ತಾವು ಛೀಮಾರಿ ಹಾಕಬೇಕು ಎನ್ನತಕ್ಕದ್ದನ್ನೂ ಕೂಡ ತಮಗೆ ಕೇಳುತ್ತೇನೆ.

10.50 ಎ.ಎಂ.

ಶ್ರೀ ಧರ್ಮ್‌ಸಿಂಗ್:- ಮಾನ್ಯ ಅಧ್ಯಕ್ಷರೆ, ನೀವು ನಮ್ಮ ಸಹಾಯಕ್ಕೆ ಬರಬೇಕು. ಏಕೆಂದರೆ, ಅಧಿವೇಶನ ನಡೆಯುತ್ತಿರುವ ಸಮಯದಲ್ಲಿ ನನ್ನ ಕ್ಷೇತ್ರದಲ್ಲಿ ಇವ್ಹೊತ್ತು ನಡೆಯಬೇಕಾಗಿದ್ದ ಚುನಾವಣೆಯನ್ನು ದೂರವಾಣಿ ಮುಖಾಂತರ ಮಾತನಾಡಿ ಮುಂದೂಡಿಸಿರುವುದು ಸರ್ಕಾರಕ್ಕೆ ಸೂಕ್ತವಾದುದಲ್ಲ. ಇದಕ್ಕೆ ಯಾರೂ ಒಪ್ಪಿಲ್ಲ, ಸಂಬಂಧಪಟ್ಟ ಇಲಾಖೆಯವರೂ ಸಹ ಚುನಾವಣೆ ಮುಂದೂಡಿರುವುದು ಒಪ್ಪತಕ್ಕದಲ್ಲವೆಂದು ಹೇಳಿದ್ದಾರೆ. ಮಂತ್ರಿಗಳಿಗೂ ಹೇಳಿದ್ದೇನೆ. ಈಗ ಚುನಾವಣೆ ಮುಂದೂಡಿರುವುದರಿಂದ, ಇದಕ್ಕೆ ತಮ್ಮ ಬಳಿ ಉತ್ತರವಿಲ್ಲ. ಅಲ್ಲದೆ, ಈಗಾಗಲೇ ಏನು ಗೆಜೆಟ್ ನೋಟಿಫಿಕೇಶನ್ ಹೊರಡಿಸಿದ್ದೀರಿ, ಇದನ್ನು ರೆಸ್ಟೋರ್ ಮಾಡಿ ಅಲ್ಲಿ ಚುನಾವಣೆ ನಡೆಸಬೇಕು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವುದರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ಇದರ ಅರಿವು ಇರಲಿಕ್ಕಿಲ್ಲ. ಆದುದರಿಂದ, ಇದರ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಅವರ ಮುಖಾಂತರ ಒಂದು ಹೇಳಿಕೆಯನ್ನು ಕೊಡಿಸುತ್ತೇನೆ. ಆದರೆ, ಮೀಸಲಾತಿಗೆ ಸಂಬಂಧಿಸಿದಂತೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಬಿಂದುಗಳನ್ನು ಹಂಚುವಾಗ ಕೆಲವು

ಸಂದರ್ಭಗಳಲ್ಲಿ ತಪ್ಪಾಗಿರುವುದನ್ನು ಸರಿಪಡಿಸಿರುವ ನಿದರ್ಶನಗಳಿವೆ. ಬಹುಶಃ ನೀವು ಹೇಳಿರುವ ಪ್ರಕಾರ ಎಲ್ಲಾದರೂ....

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವೆಲ್ಲವೂ ಮುಗಿದುಹೋಗಿದೆ. ಅವರು ಇಲ್ಲಿದ್ದುದನ್ನು ಅಲ್ಲಿಗೆ, ಅಲ್ಲಿದ್ದುದನ್ನು ಇಲ್ಲಿಗೆ ವರ್ಗಾಯಿಸಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೆ, ಇದು ಎಲ್ಲಾ ಕಡೆಗಳಲ್ಲೂ ನಡೆಯುವಂಥ ವಿಷಯ ಹಿರಿಯ ಸಚಿವರಾದ ನಾಣಯ್ಯನವರು ಈ ರೀತಿ ಹೇಳಬಾರದಿತ್ತು.

ಶ್ರೀ ಧರ್ಮ್‌ಸಿಂಗ್:- ಪಂಚಾಯಿತಿ ಚುನಾವಣೆಯಲ್ಲಿ ತಮಗೆ ಬಹುಮತ ಬಂದಿದ್ದು, ಕಾಂಗ್ರೆಸ್ ಪಕ್ಷಕ್ಕೆ ಒಂಭತ್ತು ಸ್ಥಾನಗಳು ಬಂದಿದ್ದು, ಇದನ್ನು ಸಹಿಸುವುದಿಲ್ಲವೆಂದರೆ ಇನ್ನು ಯಾವ ರೀತಿ ಮಾಡುತ್ತಾರೋ, ಗೊತ್ತಿಲ್ಲ. ಅಲ್ಲದೆ, ಈಗಾಗಲೇ 47 ಪಂಚಾಯಿತಿಗಳಲ್ಲಿ ರೋಸ್ಟರ್ ಅನ್ನು ಎಲ್ಲೆಲ್ಲಿ ಹಾಕಬೇಕು? ಸಾಮಾನ್ಯ ವರ್ಗ ಮತ್ತು ಹಿಂದುಳಿದ ವರ್ಗಗಳನ್ನು ಎಲ್ಲೆಲ್ಲಿ ಹಾಕಬೇಕು ಎಂಬುದನ್ನೆಲ್ಲಾ ನಿಗದಿಪಡಿಸಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಿದ್ದರೂ ನೀವು ರಾತ್ರೋರಾತ್ರಿ ದೂರವಾಣಿ ಮೂಲಕ ತಿಳಿಸಿ ಚುನಾವಣೆ ಮುಂದೂಡಬೇಕಾದರೆ ಏನರ್ಥ?

ಶ್ರೀ ಎಂ.ಸಿ.ನಾಣಯ್ಯ:- ಇಂತಹ ಚುನಾವಣೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿಲ್ಲ, ಮಾಡುವುದೂ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹಸ್ತಕ್ಷೇಪ ಮಾಡಿದ್ದಾರೆ. ನಿನ್ನೆ ನೀವು ಏನು ಸಹಿ ಮಾಡಿದ್ದೀರಿ, ಅದನ್ನು ಸದನದ ಮುಂದಿಡಿ. ಏಕೆಂದರೆ, ತಾವು ಪದೇ ಪದೇ ಹೇಳುತ್ತೀರಲ್ಲಾ you place that file on the table of the House. Sir, if you are satisfied then whatever decision you take, we will obey it.

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ವಿಚಾರಗಳ ಬಗ್ಗೆ ಪ್ರಸ್ತಾಪಿಸಿದ್ದು, ಸರ್ಕಾರ ಕೂಡಲೇ ಅದಕ್ಕೆ ಸ್ಪಂದಿಸಿದ್ದು, ನೀವು ಹೇಳಿರುವ ಎಲ್ಲಾ ವಿಚಾರಗಳನ್ನು ನಾವು ಒಪ್ಪಿದ್ದೇವೆ. ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ನೀವು ಗೆದ್ದು ಬಂದರೇನು? ನಾವು ಗೆದ್ದು ಬಂದರೇನು? ಒಟ್ಟಿನಲ್ಲಿ ಅಲ್ಲಿ ಆಡಳಿತ ನಡೆಯಬೇಕು ತಾನೇ? ಬಹುಶಃ ಬಿಂದುಗಳನ್ನು ಪಂಚುವಾಗ ಎಲ್ಲಾದರೂ ತಪ್ಪುಗಳಾಗಿದ್ದರೆ.....

ಶ್ರೀ ಕಾಗೋಡು ತಿಮ್ಮಪ್ಪ:- ಈ ವಾದ ಸರಿಯಲ್ಲ.

ಅಧ್ಯಕ್ಷರು:- ಅವರು ಹೇಳಿದ್ದೇನೆಂದರೆ, ನೀವಾದರೇನು? ನಾವಾದರೇನು? ಅಪೆಕ್ಸ್ ಲೆವೆಲ್‌ನಲ್ಲಿ ನಾವೆಲ್ಲಾ ಒಂದೇ ಆಗಿದ್ದೇವೆಂದು.

ಶ್ರೀ ಎಂ.ಸಿ.ನಾಣಯ್ಯ:- ಈ ವಿಚಾರದಲ್ಲಿ ಕಾನೂನಿನಡಿಯಲ್ಲಿ ಏನಾದರೂ ತಪ್ಪಿಸಗಿದ್ದರೆ, ಕಾನೂನು ಇಲಾಖೆಯಿಂದ ಆ ಕುರಿತ ವಿವರ ತರಿಸಿ ನೋಡಿ, ಸಂಬಂಧಿತ ಕಾನೂನಿನಲ್ಲಿಯೇ ತಪ್ಪಾಗಿದ್ದರೆ ಅದನ್ನು ಸರಿಪಡಿಸುತ್ತೇನೆ. 'ಕಾನೂನಿನಲ್ಲಿ ಆ ರೀತಿ ಮಾಡುವುದಕ್ಕೆ ಅವಕಾಶವಿಲ್ಲ'ವೆಂದು ನೀವು ಏನು ಹೇಳಿದ್ದೀರಿ, ಅದರ ಬಗ್ಗೆಯೂ ಕೂಡ ನಾನು ಖುದ್ದಾಗಿ ನೋಡಿ ಏನಾದರೂ ತಪ್ಪಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಆಮೇಲೆ ಬಿಂದುಗಳನ್ನು ಹಂಚುವಾಗ ಎಲ್ಲಾದರೂ ತಪ್ಪಾಗಿದ್ದರೆ ಅದನ್ನು ಸರಿಪಡಿಸುವ ಅಧಿಕಾರ ಸರ್ಕಾರಕ್ಕಿದೆ. ಬಹುಶಃ ಆ ನಿಟ್ಟಿನಲ್ಲಿಯೇ ಏನಾದರೂ ಮಾಡಿದ್ದಾರೆಯೇ ಎಂಬುದನ್ನು ನಾನು ನೋಡಿ, ಈಗ ಪ್ರಸ್ತಾಪವಾಗಿರುವ ವಿಷಯವನ್ನು ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಒಂದು ಹೇಳಿಕೆ ಕೊಡಿಸುತ್ತೇನೆ. ನಾವು -ನೀವು ಒಟ್ಟಿಗೆ ಹೋಗೋಣ. ಏಕಿಷ್ಟು ತರಾತುರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇವೊತ್ತು ಬೆಳಿಗ್ಗೆ ಹನ್ನೊಂದು ಗಂಟೆಗೆ ನಿಗಧಿಯಾಗಿ ನಡೆಯಬೇಕಾದ ಚುನಾವಣೆಯನ್ನು ಮುಂದೂಡಬೇಕೆಂದು ಇಲ್ಲಿಂದ ಅಲ್ಲಿಗೆ ಸುದ್ದಿ ಹೋಗಿದೆ. ಚುನಾವಣೆಗೆಂದು ಪಂಚಾಯತಿಯ ಸದಸ್ಯರುಗಳು ತಮ್ಮತಮ್ಮ ಊರುಗಳಿಂದ ಪಂಚಾಯಿತಿ ಹೆಡ್‌ಕ್ವಾರ್ಟರ್ಸ್‌ಗೆ ಬಂದಿದ್ದಾರೆ. ಈಗ ಚುನಾವಣೆಯನ್ನು ಮುಂದೂಡಿದ್ದು, ಆ ಕುರಿತು ಸಂಬಂಧಪಟ್ಟ ಸಚಿವರಿಂದ ಹೇಳಿಕೆ ಕೊಡಿಸಲಾಗುವುದೆಂದು ಏನು ಹೇಳುತ್ತಿದ್ದೀರಿ, ಈಗ ಚುನಾವಣೆ ಮುಂದೂಡಿ 15-20 ದಿವಸಗಳಾದ ನಂತರ ಪುನಃ ಅದನ್ನು ಸಮರ್ಥಿಸಿಕೊಳ್ಳುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದೀರಾ? ಈಗ ಅದರ ಬಗ್ಗೆ ಸ್ಟೇ ಮಾಡಿರುವುದನ್ನು ತೆರವುಗೊಳಿಸಿ ಅಲ್ಲಿ ತಾವು ಚುನಾವಣೆ ನಡೆಸಬೇಕು.

ಶ್ರೀ ಎಂ.ಸಿ.ನಾಣಯ್ಯ:- ನಾನು ಇಷ್ಟು ಮಾತ್ರ ಹೇಳುತ್ತೇನೆ: ಕಾನೂನು ಭಾಗದಲ್ಲಿ ಏನಾದರೂ ತಪ್ಪಾಗಿದ್ದರೆ ಅದನ್ನು ಸರಿಪಡಿಸುತ್ತೇನೆ. ಆದರೆ ತಾವು ಹೇಳಿದ ಹಾಗೆ ಇಂತಹ ಯಾವುದಕ್ಕೆ ಆಗಲಿ ನಾವು ಕೈ ಹಾಕುವುದಿಲ್ಲ, ನಾವು ಕೈ ಹಾಕಿಲ್ಲ, ಕೈ ಹಾಕಲು ಮನಸ್ಸಿಲ್ಲ.

ಶ್ರೀ ಧರ್ಮ್‌ಸಿಂಗ್:- ನೀವು ಕೈ ಹಾಕಿದ್ದೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಬರೀ ಕೈಯೊಂದೇ ಅಲ್ಲ, ಅವರು ತಲೆಯನ್ನೂ ಹಾಕಿದ್ದಾರೆ, ಜೊತೆಗೆ ಎರಡು ಕೈಗಳನ್ನೂ ಹಾಕಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ತಾವು ರಕ್ಷಣೆ ಕೊಡಬೇಕು. ಅಪರೂಪಕ್ಕೆ ಇವೊತ್ತು ಹಿರಿಯ ಸದಸ್ಯರಾದ ಧರ್ಮ್‌ಸಿಂಗ್‌ರವರು ತಮ್ಮ ಕ್ಷೇತ್ರದ ಬಗ್ಗೆ ಇಷ್ಟು ಧಾರಾಳವಾಗಿ ಹೋರಾಟ ಮಾಡುತ್ತಿರುವಾಗ ತಾವು ಅವರಿಗೆ ಸಹಕಾರ ಕೊಡಬೇಕು.

ಅಧ್ಯಕ್ಷರು:- ನಾವು ಆ ವಿಚಾರದಲ್ಲಿ ಅಪಾರವಾದ ನಂಬಿಕೆಯಿಟ್ಟು ಅವರಿಗೆ ಸಹಕರಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ನನಗನ್ನಿಸುತ್ತದೆ, ಇವೊತ್ತು ಬೆಳಿಗ್ಗೆ ನಡೆಯಬೇಕಾಗಿದ್ದ ಚುನಾವಣೆಯನ್ನು ಏಕಾಏಕಿ ಮುಂದೂಡುವುದರ ಉದ್ದೇಶವೇನಿತ್ತು? ಇದು ರಾಜಕಾರಣ. ಬೇರೆ ಮಾತಿಲ್ಲ. ಇದರ ಬಗ್ಗೆ ಸುಮ್ಮನೆ ಕಥೆ ಹೇಳುವುದು ಬೇಡ. ತಾವು ಕಾನೂನು ಎಂದು ಹೇಳುತ್ತಿದ್ದೀರಿ, ಯಾವ ಕಾನೂನು? ಚುನಾವಣೆಯನ್ನು ಮುಂದೂಡಿ ಎಂದು ಹೇಳಿದವರು ಯಾರು? ಇವೊತ್ತು ಚುನಾವಣೆ ನಿಗದಿಯಾಗಿದ್ದು ತಮ್ಮ ಮತ ಚಲಾಯಿಸಲು ಪಂಚಾಯಿತಿ ಸದಸ್ಯರುಗಳೆಲ್ಲರೂ ಬಂದಿರುವಾಗ ಏಕ್‌ದಂ ಚುನಾವಣೆಯನ್ನು ಮುಂದೂಡಿದರೆ ಇದು ಸರ್ವಾಧಿಕಾರವೆಂದು ತಿಳಿದುಕೊಂಡಿದ್ದೀರೋ?

ಶ್ರೀ ಎಂ.ಸಿ.ನಾಣಯ್ಯ:- ಹಿಂದಿನ ಮೀಸಲಾತಿ ಪ್ರಕಾರ ಕಾನೂನಿಗೊಳಪಟ್ಟು ಆಗದಿರುವ ಬಿಂದುಗಳ ಹಂಚಿಕೆಯಾಗಬೇಕು. ಇಲ್ಲವೆಂದರೆ, ಹಳೆಯ ಮೀಸಲಾತಿ ಪ್ರಕಾರ ಹಂಚಿಕೆಯಾಗಿರುವ ಬಿಂದುಗಳ ಆಧಾರದ ಮೇಲೆ ಚುನಾವಣೆ ನಡೆದರೆ, ನಾಳೆ ಆ ವಿಷಯವಾಗಿ ನ್ಯಾಯಾಲಯಕ್ಕೆ ಹೋದರೆ ರದ್ದಾಗುವಂತಾಗಬಾರದು. ಅದು ರದ್ದಾಗದಂತೆ ಮಾಡಬೇಕೆಂಬ ಹಿನ್ನೆಲೆಯಲ್ಲಿಯೇ ಆ ರೀತಿ ಕ್ರಮ ಕೈಗೊಳ್ಳಲಾಗಿದೆಯೇ ಹೊರತು ಇನ್ನು ಯಾವುದೇ ಉದ್ದೇಶದಿಂದಲ್ಲ. ಒಂದು ವೇಳೆ ಆ ರೀತಿ ಮಾಡುವಲ್ಲಿ ತಪ್ಪಾಗಿದ್ದರೆ ಅದರ ಬಗ್ಗೆ ವಿಚಾರಣೆ ಮಾಡಿ ನಂತರ ತಮಗೆ ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ತಾವೇಕೆ ಇದನ್ನು ಡಿಫೆಂಡ್ ಮಾಡಿಕೊಳ್ಳುತ್ತೀರಿ?

ಶ್ರೀ ಎಂ.ಸಿ.ನಾಣಯ್ಯ:- ನಾನೇಕೆ ಸ್ವಾಮಿ ಡಿಫೆಂಡ್ ಮಾಡಿಕೊಳ್ಳಬೇಕು? ನಾನು ಹೇಳುತ್ತೇನೆ. ಕಾನೂನಿನಡಿಯಲ್ಲಿ ಮಾತ್ರ ನಾನು ಖಂಡಿತವಾಗಿಯೂ ಹೊಂದಾಣಿಕೆ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ನೀವು ಕಡತ ನೋಡಿ ಈ ವಾದ ಮಾಡಿ.

ಶ್ರೀ ಎಂ.ಸಿ.ನಾಣಯ್ಯ:- ಕಡತವನ್ನು ನೋಡಿ ನಾನು ಮಾನ್ಯ ಸದಸ್ಯರಾದ ಧರ್ಮ್‌ಸಿಂಗ್‌ರವರಿಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಈ ಹಂತದಲ್ಲಿ ಚುನಾವಣೆ ಮುಂದೂಡುವುದಕ್ಕೆ ಕಾರಣವೇನಿತ್ತು?

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ:- ಯಾವುದೇ ತರಹ ಹಸ್ತಕ್ಷೇಪವೆಸಗದೆ ಕಾನೂನಿನಡಿಯಲ್ಲಿ ಅಗತ್ಯವಾದ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಮಾಟಾಳ್ ನಾಗರಾಜ್:- ಹತ್ತೊಂಭತ್ತನೇ ತಾರೀಖಿನಂದು ಚುನಾವಣೆ ನಡೆಸಲಾಗುವುದೆಂದು ಹೇಳಿ, ಇವೊತ್ತು ಚುನಾವಣೆಯನ್ನು ಮುಂದೂಡಿದ್ದೀರಿ. ಚುನಾವಣೆ ಮುಂದೂಡತಕ್ಕ ಥ ಉದ್ದೇಶ ಸರ್ಕಾರಕ್ಕೇನಿತ್ತು? ಇದು ರಾಜಕಾರಣವಲ್ಲದೆ ಬೇರೆ ಉದ್ದೇಶವೇ ಇಲ್ಲ. ಬೇಕೆಂತಲೇ ಆ ಕ್ಷೇತ್ರದಲ್ಲಿ ತಮ್ಮ ಪಕ್ಷದವರಿಗೆ ಬೆಂಬಲ ಕೊಡುವುದಕ್ಕೋಸ್ಕರ ನಡೆದಿರುವಂಥ ಒಂದು ಕುತಂತ್ರವಾಗಿದೆ.

ಶ್ರೀ ಎಸ್.ಎಸ್.ಪಾಟೀಲ್:- ಈ ತರಹ ನಾವು ಮಾಡುವುದಿಲ್ಲವೆನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ನನ್ನ ಕ್ಷೇತ್ರದ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಬಹುಮತ.....

ಶ್ರೀ ಧರ್ಮ್‌ಸಿಂಗ್:- ಆ ಕಥೆ ನಮಗೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇಲ್ಲಿ ಮಿಸ್ ಅಂಡರ್‌ಸ್ಟ್ಯಾಂಡಿಂಗ್ ಬೇಡ. ಏನು ತಪ್ಪಾಗಿದೆ, ಅದನ್ನು ತಿದ್ದುವಂಥ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿ, ಅವರ ಮನಸ್ಸು ಒಪ್ಪದೇ ಇದ್ದರೂ ಸಹ ಅವರು ಬಾಯಿಂದ ನುಡಿಯುತ್ತಿದ್ದಾರೆ. ಈಗಾಗಲೇ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಗೆ 47 ಮಂಡಲ ಪಂಚಾಯಿತಿ ಮತ್ತು ಟೌನ್ ಪಂಚಾಯಿತಿಯಲ್ಲಿ ರೋಸ್ಟರ್ ಪ್ರಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಿದ್ದೀರಿ. ಆದರೆ, ತರಾತುರಿಯಲ್ಲಿ ಅಫಜಲಪುರದ ರೋಸ್ಟರ್ ಅನ್ನು ಜೇವರ್ಗಿಗೆ, ಜೇವರ್ಗಿ ರೋಸ್ಟರ್ ಅನ್ನು ಅಫಜಲಪುರಕ್ಕೆ ಅಂದರೆ ಸಚಿವರಾದ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ ಅವರ ಕ್ಷೇತ್ರದಿಂದ ಧರ್ಮ್‌ಸಿಂಗ್‌ರವರ ಕ್ಷೇತ್ರಕ್ಕೆ ಮತ್ತು ಧರ್ಮ್‌ಸಿಂಗ್‌ರವರ ಕ್ಷೇತ್ರದಿಂದ ರೋಸ್ಟರ್ ತೆಗೆದುಕೊಂಡು ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್‌ರವರ ಕ್ಷೇತ್ರಕ್ಕೆ ಬದಲಾಯಿಸಿದ್ದೀರಿ. ಈ ರೀತಿ ಯಾವುದೇ ಕಾನೂನಿನಡಿಯಲ್ಲಿ ಮಾಡುವುದಕ್ಕೆ ಬರುವುದಿಲ್ಲವೆಂದು ನಾವು ದೂರವಾಣಿ ಮೂಲಕ ಕೇಳಿದಾಗ ಮಂತ್ರಿಗಳೂ ಹೇಳಿದ್ದಾರೆ, ಕಾನೂನು ಇಲಾಖೆಯ ಕಾರ್ಯದರ್ಶಿಯವರೂ ಹೇಳಿದ್ದಾರೆ, ಜಿಲ್ಲಾಧಿಕಾರಿಯವರೂ ಹೇಳಿದ್ದಾರೆ. ಎಲ್ಲರೂ ಕೂಡ ಹೇಳಿದ ನಂತರ ಮುಖ್ಯಮಂತ್ರಿಗಳು ಆ ಕುರಿತ ಕಡತವನ್ನು ನೇರವಾಗಿ ತರಿಸಿಕೊಂಡು ಆಜ್ಞೆ ಮಾಡಿ ನಿಮಗೆ ಕಳುಹಿಸಿದರು. ಈ ರೀತಿ ಮಾಡುವುದಕ್ಕೆ ಯಾವ ಕಾನೂನಿನಲ್ಲಿ ಅವಕಾಶವಿದೆ? ಮತ್ತು ಯಾವ ಕಾನೂನಿಗೆ ನೀವು ಮರ್ಯಾದೆ ಕೊಡುತ್ತೀರಿ?

ಅಧ್ಯಕ್ಷರು:- ಈಗ ನಾನು ಅವರು ಹೇಳಿದ್ದನ್ನು ಕೇಳಿದ್ದೇನೆ ಮತ್ತು ತಾವು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಏನು ಸಮಜಾಯಿಷಿ ಕೊಟ್ಟಿದ್ದೀರಿ ಅದನ್ನೂ ಕೇಳಿದ್ದೇನೆ. ಕಾನೂನಿನಡಿಯಲ್ಲಿ ಆಶ್ರಯ ಪಡೆದುಕೊಂಡು ನಿಮ್ಮ ವಾದವನ್ನು ಮಂಡಿಸುವುದಾದರೂ ಕೂಡ ಇವೊತ್ತು ಬೆಳಗ್ಗೆ ನಿಗದಿಯಾಗಿದ್ದಂಥ ಚುನಾವಣೆಯನ್ನು ಮುಂದೂಡಿರುವುದು ಮೇಲ್ನೋಟಕ್ಕೆ ಸರಿ ಕಾಣುವುದಿಲ್ಲ, ಹಿಂದೆ ಅವರೂ

ಮಾಡಿರಬಹುದು. ವಿರೋಧ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ನೆನಪಿರಬಹುದು. ನನ್ನ ಕ್ಷೇತ್ರದಲ್ಲಿ ಹಿಂದೆ ಬ್ಯಾಂಕಿಗೆ ಚುನಾವಣೆ ದಿನಾಂಕ ನಿಗದಿಪಡಿಸಿದಾಗ ಹತ್ತು ಸಲ ಮುಂದೂಡಲ್ಪಟ್ಟಿತು, ಅದು ಬೇರೆ ಪ್ರಶ್ನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಪಿ.ಎಲ್.ಡಿ. ಬ್ಯಾಂಕ್ ಬಗ್ಗೆ ಇವರಿಗೆ ಅಧಿಕಾರವಿರುವುದರಿಂದ ಇವರು ಮಾಡಲಿ.

ಅಧ್ಯಕ್ಷರು:- ಈಗ ಅವರು ಕೂಡ ಅದನ್ನೇ ಹೇಳುವುದು. ಕಾನೂನಿನ ನೆಪ ತೆಗೆದು ಕಾನೂನಿನ ನೆರಳಿನಲ್ಲಿ ಇವೆಲ್ಲ ಮಾಡುವುದು ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದಕ್ಕೆ ಕಾನೂನಿನ ಬೆಂಬಲವಿಲ್ಲ. ಕಾನೂನಿನ ಬೆಂಬಲವಿದ್ದರೆ ನಾನೂ ಒಪ್ಪುತ್ತೇನೆ. But a wrong message should not go. ಕಾನೂನಿನ ಬೆಂಬಲವಿದೆ, ಅದಕ್ಕೋಸ್ಕರ ಮಾಡಿದ್ದಾರೆ ಎನ್ನುವುದು ಬೇಡ.

ಅಧ್ಯಕ್ಷರು:- ಮೇಲ್ನೋಟಕ್ಕೆ ಇದು ಸರಿಯಾಗಿ ಕಾಣುವುದಿಲ್ಲವಾದ್ದರಿಂದ, ದಯಮಾಡಿ please get in touch with the Chief Minister. Kindly come back to the House before the conclusion of the session today and give some positive information.

SRI M.C.NANAIAH:- I certainly agree with the suggestion of the Hon'ble Speaker. ಅವರು ಈಗ ವಿಚಾರವನ್ನು ಎತ್ತಿದ್ದಾರೆ. ಇದರಲ್ಲಿ ಏನಾಗಿದೆ ಎಂಬುದನ್ನು ನೋಡಿಕೊಂಡು ಬಂದು ನಾನೇ ಉತ್ತರವನ್ನು ಹೇಳುತ್ತೇನೆ. ಹಿಂದೆ ಮಾಡಿರತಕ್ಕದನ್ನು ಮುಂದುವರೆಸಿಕೊಂಡು ಹೋಗಬೇಕು ಎನ್ನತಕ್ಕದ್ದು ಸರ್ಕಾರದ ಚಿಂತನೆಯಲ್ಲ. ಹಿಂದೆ ಬೇಕಾದಷ್ಟು ನಡೆದಿರಬಹುದು. ಆದರೆ ನಾವೂ ಅದನ್ನು ಮಾಡಿಕೊಂಡು ಹೋಗುತ್ತೇವೆಂಬುದಿಲ್ಲ. ಬಹುಶಃ ಇದರಲ್ಲೆನೋ ಆಡಳಿತಾತ್ಮಕವಾದ ತೊಡಕು ಇರಬಹುದು, ಅದು ನನಗೆ ಗೊತ್ತಿಲ್ಲ I will find out the reason for this and will come back to the House.

MR.SPEAKER:- You should come back with an answer.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಅಲ್ಲಿ ಇವತ್ತು 11 ಗಂಟೆಗೆ ಚುನಾವಣೆ ಇದೆ. ಚುನಾವಣೆ ಮಾಡಬಾರದೆಂದು ಇವರು ಸಂದೇಶ ಕಳಿಸಿದ್ದಾರೆ. ಆದ್ದರಿಂದ 12 ಗಂಟೆಯೊಳಗಾಗಿ ತಾವು ಕರೆಸಿ ಮಾತನಾಡಿ ಇಲ್ಲ ಹೇಳಿಕೆಯನ್ನು ಕೊಟ್ಟರೆ ನಾವು ಅನ್ಯಾಯವಾಗಿದೆ ಸರಿಪಡಿಸುತ್ತಾರೆ ಎಂದು ಅವರಿಗೆ ತಿಳಿಸಬಹುದು. ಇಲ್ಲದಿದ್ದರೆ ನಾವು ಬೇರೆ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ.

+ ಅಧ್ಯಕ್ಷರು:- ನೀವು ನಿಮ್ಮ ಅನುಕೂಲಕ್ಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು ನಿಮ್ಮ ಹಕ್ಕು. ಅದಕ್ಕೆ ನಾನು ಅಡ್ಡಬರುವುದಿಲ್ಲ. ನನಗೆ ನೆನಪಿದ್ದಂತೆ ಇಲ್ಲಿ ನಡೆದಿರುವ ನಡಾವಳಿಯನ್ನು ನೋಡಿದರೆ ಇಂಥ ವಿಚಾರಗಳಲ್ಲಿ ಸಭಾಧ್ಯಕ್ಷರು ಮಧ್ಯಪ್ರವೇಶಮಾಡಿ ಸರ್ಕಾರಕ್ಕೆ ನಿರ್ದೇಶನ ಕೊಡತಕ್ಕದ್ದು ಬಹಳ ಅಪರೂಪವಾದುದು. ನನಗೆ ರಾಜಕೀಯದಲ್ಲಿ ವೈಯಕ್ತಿಕವಾಗಿ ಸ್ಥಾಪಿತ ಹಿತಾಸಕ್ತಿ ಇಲ್ಲದಿರುವುದರಿಂದ, ಆ ತತ್ವದಲ್ಲಿ ನನಗೆ ನಂಬಿಕೆ ಇಲ್ಲದಿರುವುದರಿಂದ, ಈ ರೀತಿಯಾದ ಅನ್ಯಾಯಗಳು ಆಗಬಾರದು ಎನ್ನತಕ್ಕ ದೃಷ್ಟಿಯಿಂದ ಸರ್ಕಾರಕ್ಕೆ ನಿರ್ದೇಶನ ನೀಡಿದ್ದೇನೆ. ಹನ್ನೆರಡು ಗಂಟೆ, ಹನ್ನೆರಡೂವರೆ ಗಂಟೆಗೆ ಹೇಳಿಕೆಯನ್ನು ಕೊಡಿ ಎನ್ನುವುದರ ಬದಲಾಗಿ ಈ ದಿನ ಸಭೆ ಮುಗಿಯುವುದರೊಳಗಾಗಿ ಸರ್ಕಾರದ ವರದಿ ಕೊಡಿ ಎಂದು ಹೇಳಿದ್ದೇನೆ. ಈ ಕ್ಷೇತ್ರಗಳ ವಿಂಗಡನೆ ಮಾಡಿದ್ದು, ಮಾಸಲಾತಿ ಮಾಡಿದ್ದರ ಬಗ್ಗೆ ತಮಗೆ ಹೇಳಬೇಕೆಂದರೆ ನನ್ನ ಕಛೇರಿಗೆ ಬನ್ನಿ ಎಷ್ಟು ಕಷ್ಟವಿದೆ ಎಂಬುದು ಮ್ಯಾಪ್ ಸಹಿತ ತೋರಿಸುತ್ತೇನೆ. ನನ್ನ ಕ್ಷೇತ್ರದ್ದು ಮ್ಯಾಪ್ ಸಹಿತ ತೋರಿಸುತ್ತೇನೆ. ಅದೆಲ್ಲಾ ಹಿಂದಿನ ಸರ್ಕಾರ ಇದ್ದಾಗ ಆಗಿರತಕ್ಕದ್ದು. ಎಷ್ಟು ಘೋರವಾದ ಅನ್ಯಾಯವಾಗಿದೆಯೆಂದರೆ ನಾಚಿಕೆಯಿಂದ ತಲೆತಗ್ಗಿಸಬೇಕಾಗುತ್ತದೆ. ಮಾನ್ಯ ಎಂ.ಪಿ.ಪ್ರಕಾಶ್‌ರವರಿಗೆ ನೆನಪಿರಬಹುದು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಯ ಪ್ರಶ್ನೆ ಬಂದಾಗ ಮತಕ್ಷೇತ್ರಗಳು ವಿಂಗಡಣೆಯಾಗಿರುವುದನ್ನು ಬದಲಾಯಿಸಲು ಆಗುವುದಿಲ್ಲ ನೀವೇನಾದರು ಮಾಡಿಕೊಳ್ಳಿ ನನಗೇನೂ ಅಗತ್ಯವಿಲ್ಲವೆಂದು ಸಿಟ್ಟುಮಾಡಿಕೊಂಡು ಹೋದರು. 23 ಕಿಲೋಮೀಟರ್ ಅಂತರದಲ್ಲಿ ಒಂದು ತಾಲ್ಲೂಕು ಪಂಚಾಯತಿ ಮತಕ್ಷೇತ್ರ. ಅಲ್ಲಿಂದ ಒಂದು ಊರು ಅಲ್ಲಿಂದ ಒಂದು ಊರು, ತಾವು ಮ್ಯಾಪ್‌ನ್ನು ನೋಡಿಬಿಟ್ಟರೆ ನೀವು ಹೆದರಿ ಓಡಿಬಿಡುತ್ತೀರಿ. ಇವತ್ತು ನೀವು ಅಧಿಕಾರದಲ್ಲಿರಬಹುದು, ನಾಳೆ ಅವರು ಅಧಿಕಾರಕ್ಕೆ ಬರಬಹುದು, ಇನ್ನೊಂದು ದಿವಸ ಬೇರೆಯವರು ಅಧಿಕಾರಕ್ಕೆ ಬರಬಹುದು, ಆ ರೀತಿ ಅಧಿಕಾರವಿದ್ದಾಗ ಈ ರೀತಿಯ ಕ್ಷುಲ್ಲಕ ಕಾರಣಗಳಿಗಾಗಿ ಅಧಿಕಾರವನ್ನು ದುರಪಯೋಗ ಮಾಡಿಕೊಳ್ಳತಕ್ಕದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಂದೂ ಸಾಧುವಲ್ಲ. ಯಾರೂ ಮಾಡಬಾರದು Let us all learn a lesson from this I request the hon'ble Law Minister to come back to the House before we rise today with a positive information.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ತಮ್ಮ ಮಾತಿನ ಬಗ್ಗೆ ನಮಗೆ ಬಹಳ ನಂಬಿಕೆ ಇದೆ. ಇದರ ಜೊತೆಗೆ ತಮಗೆ ಒಂದು ಅಂಶವನ್ನು ಹೇಳುತ್ತೇನೆ. ತಮಗೂ ಅನುಭವವಿರಬಹುದು. ಸಣ್ಣ, ದೊಡ್ಡ ಎಲ್ಲಾ ಸಹಕಾರ ಸಂಘಗಳಿಗೆ ನಾಮಕರಣ ಮಾಡುವ ಪದ್ಧತಿಯಿದೆ. ಎಲ್ಲಾ ಸಹಕಾರಿ ಸಂಘಗಳಿಗೆ ನೂರಕ್ಕೆ ನೂರರಷ್ಟು ತಮ್ಮ ಪಕ್ಷದವರನ್ನೇ ನಾಮಕರಣ ಮಾಡುತ್ತಾರೆ. ಈ ರೀತಿಯಾದರೆ ಉಳಿದವರ ಗತಿಯೇನಾಗಬೇಕು? ಉಳಿದವರ ಪರಿಸ್ಥಿತಿ ಏನಾಗಬೇಕು? ನಾವು ವಿರೋಧ